ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ಮಂಖ್ಯಮಂತ್ರಿಗಳ ಮತ್ತು ಸಚಿವರುಗಳ ಪ್ರವಾಸದ ವೆಚ್ಚ ಇದರಲ್ಲಿ ಸೇರಿಲ್ಲ. ಟಿ. ಎ. ಬಿಲ್ಲುಗಳನ್ನು ತಯಾರು ಮಾಡಿ ಕಳುಹಿಸದೇ ಇರುವ ಕಾರಣ, ಅದು ಬಂದಿಲ್ಲ. ಮುಖ್ಯ ಮಂತ್ರಿಗಳ ಮತ್ತು ಸಚಿವರುಗಳ ಡಿ. ಎ. ವೆಚ್ಚವನ್ನು ಸೇರಿಸ ಲಾಗಿದೆ. ವಿಮಾನಯಾನದ ಟಿಕೇಟಿನ, ಆತಿಥ್ಯದ ಖರ್ಚನ್ನು ಕನ್ನಡ ಬಳಗದವರು ಬರಿಸಿದ್ದಾರೆ. ಇದರ ವಿಚಾರದಲ್ಲಿ ಈಗಾಗಲೇ ಲಕ್ಕಪ್ಪನವರಿಗೆ ಉತ್ತರ ಕೊಟ್ಟಿದ್ದೇನೆ. ಡಿ, ಎ. ಗೆ ೩೦,೦೦೦ ಕ್ಕಿಂತ ಹೆಚ್ಚು ಖರ್ಚು ಬರುವುದಿಲ್ಲ.

ಶ್ರೀ ಡಿ. ಜಿ. ಬಸವನಗೌಡ.—ಸ್ವಾಮಿ, ಇದು ಕ್ವಶ್ಚನ್ ಅವರ್ಸೋ, ಕ್ವಶ್ಚನ್ಸ್ ಅವರ್ಸೋ ಎಂಬುದು ನಮಗೆ ಗೊತ್ತಾಗುತ್ತಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಸೋಲ್ ಒಲಂಪಿಕ್ಸ್‌ಗೆ ಭಾರತದಿಂದ ನೂರಾರು ಜನರನ್ನು ಕಳುಹಿ ಸಿದ್ದರೂ ಸಹ ಒಂದೇ ಒಂದು ಬಹುಮಾನ ಬರಲಿಲ್ಲ. ಅದು ದಂಡ ತಾನೆ ? ಇದಕ್ಕೆ ತಾವು ಉತ್ತರ ಕೊಡಿ, ಮ್ಯಾಂಚೆಸ್ಟರ್‌ನಲ್ಲಿ ಕನ್ನಡ ಸಮ್ಮೇಳನವನ್ನು ಮಾಡಿದ ಉದ್ದೇಶ. ಬೇರೆ ರಾಷ್ಟ್ರಗಳ ಜೊತೆಗೆ ನಮ್ಮ ಬಾಂಧವ್ಯ ಬೆಳೆಯಬೇಕೆಂಬ ಉದ್ದೇಶ ದಿಂದ ಮಾಡಿದ್ದಾರೆ.

(ಗೊಂದಲ)

ಶ್ರೀ ಪಂಪಾಪತಿ.—ಹೆಮ್ಮಿಗೆಯವರನ್ನು ಸೋಲ್ ಒಲಂಪಿಕ್ಸ್‌ಗೆ ಕಳುಹಿಸಿದ್ದರೆ, ಬಂಗಾರದ ಪದಕ ತರುತ್ತಿದ್ದರು.

ಶ್ರೀ ಎನ್. ಎಂ, ಆಡ್ಯಂತಾಯ.—ಮ್ಯಾಂಚೆಸ್ಟರ್‌ನಲ್ಲಿರುವ ಕನ್ನಡ ಬಳಗದವರ ಆಹ್ವಾನದ ಮೇರೆಗೆ ಹೋಗಿದ್ದೆವು ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು. ಅವರ ಆಹ್ವಾನದ ಮೇರೆ ಟ್ರೂಪ್‌ಗಳನ್ನು ಕಳಿಸಿಕೊಡಲಾಗಿತ್ತೆಂದು ಕೂಡ ಹೇಳಿದರು. ಅಲ್ಲಿರತಕ್ಕ ಕನ್ನಡ ಬಳಗದ ಸದಸ್ಯತ್ವದ ಸಂಖ್ಯೆ ಎಷ್ಟು ? ಅದರಿಂದಾಗಿರುವ ಪ್ರಯೋಜನ ಏನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಉಪಾಧ್ಯಕ್ಷರೆ, ಸದಸ್ಯತ್ವದ ನಿಖರವಾದ ಸಂಖ್ಯೆ ಇನ್ನಲ್ಲಿ ಇಲ್ಲ. ಸಮ್ಮೇಳನಕ್ಕೆ ಭಾರತದಾದ್ಯಂತ ಸದಸ್ಯರುಗಳು ಬಂದಿದ್ದು ವಿಸಿಟರ್ ಪುಸ್ತಕದಲ್ಲಿ ಅವರ ಹೆಸರು ಇತ್ಯಾದಿಯನ್ನು ನಮೂದಿಸಿದ್ದಾರೆ. ಇಂಗ್ಲೆಂಡ್‌ನಿಂದ ಸುಮಾರು ೩೫೦ ಕ್ಕೂ ಹೆಚ್ಚು ಜನ ಬಂದಿದ್ದರು. ಯೂರೋಪಿನಿಂದ ೧೦೦ ಕ್ಕೂ ಹೆಚ್ಚು ಜನ ಬಂದಿದ್ದರು, ಅಮೇರಿಕಾದಿಂದ ೪೦ ಕೂ ಹೆಚ್ಚು ಜನ ಬಂದಿದ್ದರು. ಇತರೇ ದೇಶಗಳಿಂದಲೂ ಜನ ಬಂದಿದ್ದರು. ಅಲ್ಲಿ ಏರ್ಪಡಿಸಿದ್ದ ವಸ್ತುಪ್ರದರ್ಶನ ಮತ್ತು ಕಲೆಯನ್ನು ನೋಡಿ ಆನಂದಿಸಿದ್ದಾರೆ. ಮ್ಯಾಂಚೆಸ್ಟರ್ ಮೇಯರ್‌ರವರು ಬರೆದಿರತಕ್ಕ ವಿಷಯಗಳು ಇವೆ. ಅದಕ್ಕೆ ಸಂಬಂಧಪಟ್ಟ ಛಾಯಾಚಿತ್ರವನ್ನು ತೆಗೆಯಲಾಗಿದ್ದು, ಇವತ್ತೋ ನಾಳೆಯೋ ದೂರದರ್ಶನದವರು ಪ್ರದರ್ಶನ ಮಾಡುತ್ತಾರೆ. ಇದನ್ನು ತಮ್ಮ ಮುಖಾಂತರ ಆಡ್ಯಾಂತಾಯರವರಿಗೆ ಕಳುಹಿಸಿಕೊಡುತ್ತೇನೆ, ಅವರು ಅದನ್ನು ಮಾಡಬಹುದು.

ಮಂಗಳೂರು ತಾಲ್ಲೂಕಿನಲ್ಲಿ ಜನತಾ ಗೃಹಗಳು

೪೦೨೭. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿ ೧೯೮೫-೮೬, ೧೯೮೬-೮೭, ೧೯೮೭-೮೮ನೇ ಸಾಲಿನಲ್ಲಿ ಎಷ್ಟು ಜನತಾ ಗೃಹಗಳನ್ನು ನಿರ್ಮಾಣ ಮಾಡಲಾಗಿದೆ.

ಆ) ಈ ಸಾಲುಗಳಲ್ಲಿ ಜನತಾ ಮನೆಗಳಿಗಾಗಿ ಬಂದ ಅರ್ಜಿಗಳಲ್ಲಿ ಎಷ್ಟು ಇನ್ನೂ ವಿಲೇವಾರಿ ಆಗದೆ ಬಾಕಿ ಉಳಿದಿವೆ ?

ಇ) ಅದರಲ್ಲಿ ಹರಿಜನರಿಗೆ ಮತ್ತು ಗಿರಿಜನರಿಗೆ ನೀಡಿರುವ ಗೃಹಗಳೆಷ್ಟು ?

ಈ) ಅರ್ಜಿಗಳು ಬಾಕಿ ಉಳಿಯಲು ಕಾರಣಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ)

೧೯೮೫-೮೬	೧೯೮೬-೮೭	೧೯೮೭-೮೮
೫೭೩	೧೪೧	೧೦

(ಹಿಂದಿನ ಸಾಲುಗಳ ಮನೆಗಳು ಸೇರಿ)

ಆ) ಈ ಸಾಲುಗಳಲ್ಲಿ ವಿಲೇವಾರಿ ಆಗದೇ ಅರ್ಜಿಗಳು ಬಾಕಿ ಇರುವುದಿಲ್ಲ.

ಇ)

ವರ್ಷ	ಹಂಚಲಾಗಿರುವ ಮನೆಗಳು	ಹರಿಜನ, ಗಿರಿಜನರಿಗೆ ನೀಡಿದ ಮನೆಗಳು
೧೯೮೫-೮೬	೩೮೫	೬೯
೧೯೮೬-೮೭	೩೧೫	೫೫
೧೯೮೭-೮೮	೩೯೮	೭೯

ಈ) ಉದ್ಭವಿಸುವುದಿಲ್ಲ.

ಪ್ರಶ್ನೆ ೯೮೮ (೪೦೨೭)

ಶ್ರೀ ಬಿ. ಎಂ. ಇದಿನಬ್ಬ.—೧೯೮೫-೮೬ ರಲ್ಲಿ ೫೭೩, ೧೯೮೬-೮೭ ರಲ್ಲಿ ೧೪೧, ೧೯೮೭-೮೮ ರಲ್ಲಿ ೧೦ ಎಂದು ಉತ್ತರದಲ್ಲಿ ಇದೆ. ೧೯೮೭-೮೮ ಕ್ಕೆ ಇಷ್ಟು ಕಡಿಮೆ ಆಗಲು ಕಾರಣ ಏನು ? ಅನೇಕ ಅರ್ಜಿಗಳನ್ನು ವಿಲೇವಾರಿ ಮಾಡದೇ ಹಾಗೆಯೇ ಇಟ್ಟಿದ್ದಕ್ಕಾಗಿ ಸಿಕ್ಕಿಲ್ಲ ಎಂದು ತಿಳಿದುಬಂದಿದೆ. ಜನತಾ ಮನೆಗಳ ಗೊಡೆಗಳು ವಾಸಕ್ಕೆ ಹೋಗುವುದಕ್ಕಿಂತಲೂ ಮೊದಲೇ ಬೀಳುತ್ತವೆ. ಅಧಿಕಾರಿಗಳು ಮತ್ತು ಕಂಟ್ರಾಕ್ಟ್ ದಾರರು ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡದೇ ಅನ್ಯಾಯವಾಗಿರುವುದರಿಂದ ಜನರು ಜನತಾ ಮನೆಗಳಿಗೆ ಹೋಗಿ ಇಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಇದರ ಬಗ್ಗೆ ತನಿಖೆ ಮಾಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೆ, ನಾನು ಈ ವರ್ಷ ಕಟ್ಟಿದಂಥ ಮನೆಗಳ ಬಗ್ಗೆ ಉತ್ತರ ಹೇಳಿದ್ದೇನೆ. ೧೯೮೭-೮೮ ರಲ್ಲಿ ಪ್ರೋಗ್ರೆಸ್ ಬಹಳ ಕಡಿಮೆ ಇದೆ, ಅದರೆ ಅಲಾಟ್‌ಮೆಂಟ್ ಎನಿತ್ತು ಅಂದರೆ ಮಂಗಳೂರು ತಾಲ್ಲೂಕಿನಲ್ಲಿ ೨೯೮ ಆದರೆ ಕೇವಲ ಮನೆ ಕಟ್ಟಿದ್ದಕ್ಕೆ ಮಾತ್ರ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಕೆಲವೊಂದು ಕಡೆ ಕಳಪೆ ಕೆಲಸ ಆಗಿದೆ ಎಂದು ಹೇಳಿದರು, ಅವರು ನೇರವಾಗಿ ಎಲ್ಲಿ ಕಳಪೆಯಾಗಿದೆ ಎನ್ನುವ ಬಗ್ಗೆ ದೂರು ಸಲ್ಲಿಸಿದರೆ ತನಿಖೆ ಮಾಡಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಹರಿಜನ ಗಿರಿಜನರಿಗೆ ಕೊಡುವಂತಾದ್ದರಲ್ಲೂ ಕೂಡ ಸರಿಯಾದಂಥ ರೀತಿಯಲ್ಲಿ ಸಿಕ್ಕಿಲ್ಲ ಎಂದು ಹೇಳತಕ್ಕ ದೂರು ಇದೆ. ಅನೇಕ ಅರ್ಜಿಗಳನ್ನು ಮಾನ್ಯ ಮಾಡಲಿಲ್ಲ ಎನ್ನುವ ಬಗ್ಗೆ ದೂರು ಇದೆ, ಅದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಮನೆ ಕಟ್ಟಿಡದಲ್ಲಿ ಕಳಪೆ ಕೆಲಸ ಆಗಿರುವಂತಾದ್ದು ನನಗೆ ಗೊತ್ತಿದೆ, ಕಟ್ಟಿದಂಥ ಗೋಡೆ ಬಿದ್ದು ಹೋಗಿ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂದೂ ಹೇಳುತ್ತಾರೆ. ಈ ಬಗ್ಗೆ ತನಿಖೆ ಮಾಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಪರಿಶೀಲನೆ ಮಾಡುತ್ತೇನೆ.

ಕರ್ನಾಟಕ ಗೃಹ ಮಂಡಳಿಯು ೧೯೮೫ ರಿಂದ ೧೯೮೮ ರ ವರೆಗೆ ಬೆಂಗಳೂರು ನಗರದಲ್ಲಿ ವಿತರಿಸಿದ ಮನೆ ಮತ್ತು ನಿವೇಶನಗಳ ಬಗ್ಗೆ

೯೩೩. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಗೃಹ ನಿರ್ಮಾಣ ಮಂಡಳಿ ೧೯೮೫ ರಿಂದ ೩೧-೮ ೮೮ ರವರೆಗೆ ಬೆಂಗಳೂರು ನಗರದಲ್ಲಿ ನಿರ್ಮಿಸಿರುವ ಮನೆಗಳ ಸಂಖ್ಯೆ ಎಷ್ಟು ?